**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.377/2022

**PW**. 6

**CW**. 6

**ಸಾಕ್ಷಿಯ ಹೆಸರು –ಶೋಭ**

**ಗಂಡನ ಹೆಸರು –ಚಂದ್ರೇಗೌಡ**

**ವಯಸ್ಸು –43 ವರ್ಷಗಳು** ದಿನಾಂಕ 05–12–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಹರೇನಹಳ್ಳಿ ಗ್ರಾಮ , ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ತಾಯಿ. ಮೃತ ನಾಗೇಗೌಡ ನನ್ನ ತಂದೆ. ನನ್ನ ಗಂಡ ಮೃತಪಟ್ಟಿದ್ದು , ಈಗ್ಗೆ 15 ವರ್ಷಗಳಿಂದ ನಾನು ನನ್ನ ತಂದೆ ಮನೆಯಲ್ಲಿ ವಾಸವಾಗಿದ್ದೇನೆ. ಚಿತ್ರ ಚಾಸಾ–6 ನನ್ನ ಮಗಳು. ಈಗ್ಗೆ 3 ವರ್ಷಗಳ ಹಿಂದೆ ನನ್ನ ತಂದೆ ಮದ್ಯಪಾನ ಮಾಡಿ ಸಂಗರಶೆಟ್ಟಿಯಳ್ಳಿ ರಸ್ತೆಯ ಬಳಿ ಬಿದ್ದಿದ್ದರು. ವಿಚಾರ ತಿಳಿದು ನಾನು ಮತ್ತು ಚಾಸಾ–1 ರವರು ಹೋಗಿ ನೋಡಲಾಗಿ , ನನ್ನ ತಂದೆಗೆ ಗಾಯವಾಗಿದ್ದು , ಪಿರಿಯಾಪಟ್ಟಣ ಆಸ್ಪತ್ರೆಗೆ ನಂತರ ಮೈಸೂರು ಆಸ್ಪತ್ರೆಗೆ ದಾಖಲಿಸಿದ್ದು , ಚಿಕಿತ್ಸೆ ಫಲಕಾರಿಯಾಗದೇ ನನ್ನ ತಂದೆ ಮೃತಪಟ್ಟರು. ನಾನು ಪೊಲೀಸರ ಮುಂದೆ ಆರೋಪಿ ಹಲ್ಲೆ ಮಾಡಿದ್ದರಿಂದ ನನ್ನ ತಂದೆ ಮೃತಪಟ್ಟಿದ್ದಾರೆ ಎಂದು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**SC No.377/2022**
**PW.6**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿಯ ಹೆಂಡತಿ ಆರೋಪಿಯನ್ನು ಈಗ್ಗೆ 4 ವರ್ಷಗಳಿಂದ ತನ್ನ ತವರು ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ಆರೋಪಿ ನಮ್ಮ ಸಂಬಂಧಿಕನಾಗಿದ್ದು , ನಮ್ಮ ಮನೆಗೆ ಊಟ ತಿಂಡಿಗೆ ಬರುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಗೆ ಊಟ ತಿಂಡಿಗೆ ಬರುತ್ತಿದ್ದ ಕಾರಣ ಆರೋಪಿ ಮತ್ತು ನನ್ನ ಬಗ್ಗೆ ಊರಿನಲ್ಲಿ ಕೆಟ್ಟದ್ದಾಗಿ ಮಾತನಾಡಿಕೊಳ್ಳುತ್ತಾರೆಂದು , ನನ್ನ ತಂದೆ ಆರೋಪಿಗೆ ನಮ್ಮ ಮನೆಗೆ ಬರಬೇಡ ಎಂದು ಹೇಳಿದ. ಆ ಕಾರಣದಿಂದ ಆರೋಪಿಯು ನನ್ನ ತಂದೆಗೆ ರಸ್ತೆಯಲ್ಲಿ ಅಡ್ಡ ಹಾಕಿ ಹೊಡೆದು ಗಾಯಪಡಿಸಿದ ಎಂದರೆ ಸರಿಯಲ್ಲ. ನಾವು ನೋಡಿದಾಗ ನನ್ನ ತಂದೆಯ ತಲೆಗೆ ಮೈ ಕೈಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. ಘಟನೆ ಬಗ್ಗೆ ಎಲ್ಲ ಗೊತ್ತಿದ್ದೂ ಶವ ಪಂಚನಾಮೆ ಕಾಲಕ್ಕೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಶವ ಪಂಚನಾಮೆಯನ್ನು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಏನೂ ಇಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.